# ಆಹಾ ಸುದ್ದಿ!

★ ಸಸಿತೋಟ

ಅಮೆರಿಕದಲ್ಲಿ ಅಧ್ಯಕ್ಷ ಟ್ರಂಪ್ ತಮ್ಮ ಅಧಿಕಾರ ಸ್ವೀಕಾರ ಸಮಾರಂಭದ ಭಾಷಣದಲ್ಲಿ ‘ಬೈ ಅಮೆರಿಕನ್, ಹೈರ್ ಅಮೆರಿಕನ್’ (ಅಮೆರಿಕದಲ್ಲಿ ತಯಾರಾದ ವಸ್ತು ಖರೀದಿಸಿ, ಅಮೆರಿಕನ್ನರಿಗೆ ಉದ್ಯೋಗ ಕೊಡಿ) ಎಂಬ ಘೋಷಣೆ ಮೊಳಗಿಸಿದಾಗ ಅವರ ಹಿಂಬಾಲಕರೆಲ್ಲ ‘ಮೇಕ್ ಅಮೆರಿಕ ಗ್ರೇಟ್ ಅಗೇನ್’ ಎಂಬ ಬರಹವುಳ್ಳ ಟೋಪಿ ಧರಿಸಿದ್ದರಂತೆ. ಆದರೆ ಆ ಟೋಪಿಗಳೆಲ್ಲ ಚೀನಾ ಮೇಡ್ ಎಂದು ಆಮೇಲೆ ಗೊತ್ತಾಗಿ ಟೀಕೆಗಳ ಮಳೆಯೇ ಸುರಿಯಿತಂತೆ. ‘ಪ್ರಥಮ ಚುಂಬನಂ ದಂತ ಭಗ್ನಂ’ ಅನುಭವ ಟ್ರಂಪ್‌ಗಾದರೆ ಅಲ್ಲಿ ಚೀನಾದಲ್ಲಿ ಕ್ಸಿ ಬಾಯಿ ಮುಚ್ಚಿಕೊಂಡು ಮುಸಿಮುಸಿ ನಕ್ಕರಂತೆ.



ಪ್ಯಾಲೆಸ್ಟೈನ್‌ನ ಈ ಯುವಕ ನಬೀಲ್ ರಿಯಾದ್‌ನ ತನ್ನ ಮನೆಯಲ್ಲಿ ಹಾವು, ಚೇಳುಗಳನ್ನು ಗುಡ್ಡೆ ಹಾಕಿಕೊಂಡಿದ್ದಾನಂತೆ. ಅವುಗಳ ಜೊತೆಗೇ ಮಲಗಿ, ಎದ್ದು ಮಾಡುವ ಈ ಉರಗಪ್ರೇಮಿಗೆ ಊಟಕ್ಕೆ ಮಾತ್ರ ಅವು ಸಾಥ್ ನೀಡುವುದಿಲ್ಲವಂತೆ. ಏಕೆಂದರೆ ಅವುಗಳನ್ನೇ ರುಚಿಕರ ಭಕ್ಷ್ಯ ಮಾಡಿ ಸ್ವಾಹಾ ಮಾಡುವ ಖಯಾಲಿ ಈತನಿಗೆ.

ಹಿರಿಯ ನಾಗರಿಕರಲ್ಲಿ ಆಘಾತದಿಂದ ಬರುವ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲು ‘22 ಪುಶಪ್ ಸವಾಲು’ ಎಂಬ ಅಭಿಯಾನ ಶುರುವಾಗಿದೆಯಂತೆ. ಥಾಯ್ಲೆಂಡ್‌ನ ರೊಮೈನ್ ಎಂಬಾತ ಆನೆಯ ಮೇಲೇರಿ 22 ಬಾರಿ ಉಠ್–ಬೈಠ್ ಮಾಡಿದಾಗ ಆನೆಯೂ ತಲೆದೂಗಿತಂತೆ. ಆದರೆ ಇದನ್ನು ಅಷ್ಟು ಉನ್ನತ ಮಟ್ಟಕ್ಕೆ ಒಯ್ಯಬಾರದಿತ್ತು ಎಂದು ಹಿರಿಯರು ಅಲವತ್ತುಕೊಂಡರಂತೆ.





ಪಾಕಿಸ್ತಾನದ ಕ್ಷೌರಿಕನೊಬ್ಬ ಕೂದಲನ್ನು ಕತ್ತರಿಸಲು ಕತ್ತರಿ ಬಳಸುವುದಿಲ್ಲವಂತೆ. ಬದಲಾಗಿ ಬೆಂಕಿಯಿಂದ ನಾನಾ ಬಗೆಯ ಕೇಶವಿನ್ಯಾಸ ಮಾಡುತ್ತಾನಂತೆ. ಕೂದಲಿನ ಮೇಲೆ ಪೌಡರ್, ದ್ರಾವಣ ಎಲ್ಲವನ್ನೂ ಸವರಿ ಬೆಂಕಿ ಹಚ್ಚಿ ನಂತರ ಕೈಗಳಿಂದ ಸವರಿ ಆರಿಸುತ್ತಾನಂತೆ. ಮಂಡೆ ಬಿಸಿಯಾಗಿದೆ ಮಾರಾಯ ಎನ್ನುವುದನ್ನು ಇಲ್ಲಿ ಅಕ್ಷರಶಃ ನಿಜ ಮಾಡಿಬಿಟ್ಟಿದ್ದಾನೆ ಈ ಕ್ಷೌರಿಕ.



ಕ್ಯಾಲಿಫೋರ್ನಿಯಾದಲ್ಲಿ ಒಂದೇ ದಿನ ಬೇರೆ ಬೇರೆ ಕಡೆ ನಿಲ್ಲಿಸಿದ್ದ ಜಿಯೋರ್ಜಿಯ್ ಎಂಬಾತನ ಎರಡು ವಾಹನಗಳ ಮೇಲೆ ಮರ ಉರುಳಿ ಅಪ್ಪಚ್ಚಿಯಾದವಂತೆ. ಅದೃಷ್ಟವೆಂದರೆ ಇದೇ ಎಂದು ಆತನೇ ಸಾಮಾಜಿಕ ಜಾಲತಾಣದಲ್ಲಿ ಹಾಕಿಕೊಂಡಿದ್ದಾನಂತೆ. ಗುಜರಿಗೆ ಹೋಗುವಂಥವು ಕೈತುಂಬ ವಿಮೆ ಹಣ ತಂದರೆ ಅದೃಷ್ಟವಲ್ಲದೇ ಇನ್ನೇನು ಎಂದು ವಿರೋಧಿಗಳು ಹಲ್ಲು ಕಡಿದಿರಬಹುದು.

ಅಮೆರಿಕದ ನೂತನ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಮತ್ತೊಮ್ಮೆ ನಗೆಪಾಟಲಿಗೀಡಾಗಿದ್ದಾರಂತೆ. ಅದೂ ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ. ತನ್ನ ಮಗಳು ಇವಾಂಕಾಳನ್ನು ಟ್ಯಾಗ್ ಮಾಡಲು ಹೋಗಿ ಆಕೆಯ ಬದಲು ಇಂಗ್ಲೆಂಡ್‌ನ ಯುವತಿ ಇವಾಂಕಾಳನ್ನು ಟ್ಯಾಗ್ ಮಾಡಿದರಂತೆ. ಅಷ್ಟೂ ಸಾಲದು ಎಂಬಂತೆ ಆ ಸಂದೇಶ 4000 ಬಾರಿ ರೀಟ್ವೀಟ್ ಆಯ್ತಂತೆ. ಅರಳುಮರುಳು ಇಷ್ಟು ಮಿತಿಮೀರಬಾರದಿತ್ತು.